**ಕರ್ನಾಟಕ ಸರ್ಕಾರ**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

**ಸಂಖ್ಯೆ:** ಕಾಶಿಇ/ಮಾತಂವಿ/08/ಸಕಾಕ/2023-24 **ದಿನಾಂಕ:06/01/2024**

## ಸುತ್ತೋಲೆ

**ವಿಷಯ:** ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ದ್ವಿಭಾಷೆಗಳಲ್ಲಿ ವೆಬ್ ಸೈಟ್‌ಗಳನ್ನು ಸೃಜಿಸಿ ನಿರ್ವಹಿಸುವ ಕುರಿತು ಇಲಾಖೆ ಆಯೋಜಿಸಿರುವ ತರಬೇತಿ ಕಾರ್ಯಕ್ರಮದ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಇದುವರೆಗೆ ಇಲಾಖಾ ವ್ಯಾಪ್ತಿಯ ಎಲ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಏಕರೂಪವಾದ ಅಂಬ್ರೆಲ್ಲಾ ವೆಬ್ ಸೈಟ್ ಗಳನ್ನು NIC ಸಹಯೋಗದಲ್ಲಿ ಸೃಜಿಸಿ ನಿರ್ವಹಿಸಲಾಗುತ್ತಿತ್ತು. ಇದೀಗ ಕರ್ನಾಟಕ ಸರ್ಕಾರ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿರ್ದೇಶನಗಳ ಪ್ರಕಾರ ಹೊಸದಾಗಿ ಎಲ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವೆಬ್ ಸೈಟುಗಳನ್ನು ದ್ವಿಭಾಷೆಗಳಲ್ಲಿ, ಎಂದರೆ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ರಾಜ್ಯ ಸರ್ಕಾರದ ಇ-ಆಡಳಿತ ಇಲಾಖೆಯ ಸಹಭಾಗಿತ್ವದಲ್ಲಿ ಸೃಜಿಸಿ ನಿರ್ವಹಿಸಲು ಇಲಾಖೆ ಕ್ರಮ ವಹಿಸುತ್ತಿದೆ.

ಇಲಾಖೆಯು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ ದ್ವಿಭಾಷಾ ವೆಬ್ ಸೈಟುಗಳನ್ನು ಇ-ಆಡಳಿತ ಇಲಾಖೆಯ ಸಹಭಾಗಿತ್ವದಲ್ಲಿ ಸೃಜಿಸಿ ನಿರ್ವಹಿಸಲು ಕಾರ್ಯಪ್ರವೃತ್ತವಾಗಿರುವ ಹಿನ್ನೆಲೆಯಲ್ಲಿ, ಕೆಳಕಂಡ ಸರ್ಕಾರಿ ಪ್ರಥಮ ದರ್ಜೆ ವೆಬ್‌ಸೈಟ್ ಸಮನ್ವಯಾಧಿಕಾರಿಗಳಿಗೆ ಈ ಕುರಿತು **ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ದಿನಾಂಕ:08-01-2024ರಂದು ಬೆಳಿಗ್ಗೆ:10.00 ಗಂಟೆಯಿಂದ ಸಂಜೆ 5:00 ಗಂಟೆಯವರೆಗೆ ತರಬೇತಿ ಕೇಂದ್ರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001, ಇಲ್ಲಿ** ಆಯೋಜಿಸಿದೆ. ಕಾಲೇಜುಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ. ತರಬೇತಿಯ ನಂತರ, ಒಂದು ವಾರದೊಳಗೆ ಹೊಸ ವೆಬ್ ಸೈಟನ್ನು ಪೂರ್ಣರೂಪದಲ್ಲಿ ಚಾಲನೆಗೊಳಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ವೇಳಾಪಟ್ಟಿಗೆ ಅನುಸಾರವಾಗಿ ತರಬೇತಿ ಕಾರ್ಯಕ್ರಮದಲ್ಲಿ ಕೆಳಕಂಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವೆಬ್‌ಸೈಟ್ ಸಮನ್ವಯಾಧಿಕಾರಿಗಳ ಭಾಗವಹಿಸುವಿಕೆ ಕಡ್ಡಾಯವಾಗಿರುತ್ತದೆ ಎಂದು ಈ ಮೂಲಕ ತಿಳಿಸಲಾಗಿದೆ.

ಮುಖ್ಯ ಆಡಳಿತ ಅಧಿಕಾರಿಗಳು
**ಕಾಲೇಜು ಶಿಕ್ಷಣ ಇಲಾಖೆ**

**ಇವರಿಗೆ:**

1. ಅನುಬಂಧಿಸಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು – ವೆಬ್ ಸೈಟಿನಲ್ಲಿ ಪ್ರಕಟಿಸುವುದಕ್ಕಾಗಿ
3. ಕಚೇರಿ ಪ್ರತಿ

| Sl no | College Name | Website URL |
|---|---|---|
| 1 | ByGovt. First Grade College, Magadi - 572 130. | http://gfgc.karnataka.gov.in/Magadi/ |
| 2 | Smt. & Sri.Y.E.Rangaiah Shetty, Govt. First Grade College, Pavagada - 561 202. | http://gfgc.karnataka.gov.in/pavagada/ |
| 3 | Govt. First Grade College, Koratagere - 572 129. | http://gfgc.karnataka.gov.in/koratagere/ |
| 4 | Govt. First Grade College, Turuvekere - 572 227. | http://gfgc.karnataka.gov.in/turuvekere/ |
| 5 | Govt. First Grade College, Chikkanaikanahalli - 572 214. | http://gfgc.karnataka.gov.in/chiknayakanhalli/ |
| 6 | B.M.S Govt. First Grade College, Huliyar - 572 218. (Chikkanaikanahalli Tq.) | http://gfgc.karnataka.gov.in/huliyar/ |
| 7 | Govt. First Grade College, Madhugiri. | http://gfgc.karnataka.gov.in/madhugiri/ |
| 8 | GOVERNMENT FIRST GRADE COLLEGE, HEBBUR - 572 120, TUMKUR TALUK & DISTRICT | http://gfgc.karnataka.gov.in/hebbur/ |
| 9 | Govt. First Grade College, Tiptur - 572 201 | http://gfgc.karnataka.gov.in/tiptur/ |
| 10 | Sri Honnadevi Govt. First Grade College, Dandinashivara - 572 215. Turuvekere Tq. | http://gfgc.karnataka.gov.in/dandinashivara/ |
| 11 | Government College for Women, Chintamani - 563 125. | http://gfgc.karnataka.gov.in/chintamani-women/ |
| 12 | Govt. Womens College, Kolar - 563 101. | http://gfgc.karnataka.gov.in/kolar-women/ |
| 13 | Govt. First Grade College, Kuvempu nagar, Mysore | http://gfgc.karnataka.gov.in/kuvempunagara-mysuru/ |
| 14 | Govt. College for Women, M.C.Road, Mandya - 571 401. | http://gfgc.karnataka.gov.in/mandya-women/ |
| 15 | DR. P. DAYANANDA PAI- P. SATISHA PAI GOVERNMENT FIRST GRADE COLLEGE, MANGALORE | http://gfgc.karnataka.gov.in/mangalore/ |